ವಕ್ರವಾದ ಬೊಚ್ಚುಬಾಯಿ, ಗುಳಿಬಿದ್ದ ಗಲ್ಲ, ಬೋಳುಬೋಳಾದ ತಲೆ, ಎಲುಬಿನ ಹಂದರವಾದ ಎದೆಗೂಡು, ನಡಗುತ್ತಿರುವ ಸೊರಗಿದ ಕೈಗಳು ತಾನು ನೋಡುತ್ತಿರುವುದು ರಕ್ತಮಾಂಸ ತುಂಬಿಕೊಂಡು ಉಸಿರಾಡುವ ಜೀವಂತ ಮನುಷ್ಯರೊ ಅಥವಾ ಜೀವಚ್ಛವಗಳೊ ಎಂದೆನಿಸಿತು ಬ್ರಹ್ಮದತ್ತನಿಗೆ. ಅಲ್ಲಿ ಕುಳಿತಿರುವ ಎಲ್ಲರ ಮುಖದ ಚಹರೆ ಒಂದೇ ರೀತಿಯಾಗಿದೆ ಎಂದೆನಿಸಿ ಅವನಿಗೆ ಅಚ್ಚರಿ ಎನಿಸಿತು. ಬ್ರಹ್ಮದತ್ತನ ಹಿಂದೆಯೇ ಬಂದ ವೆಂಕಟ್ರಮಣ, 'ಈಗ ನೀವು ನೋಡುತ್ತಿದ್ದಿರಲ್ಲ ಇದು ಈ ಊರಿನ ಎಲ್ಲ ಮನೆಗಳಲ್ಲಿ ಕಾಣುವ ಸಾಮಾನ್ಯ ದೃಶ್ಯ. ಇಲ್ಲಿ ಕುಳಿತಿರುವವರಲ್ಲಿ ಕೆಲವರಿಗೆ ನಾಲ್ಕುನೂರು ವರ್ಷ ವಯಸ್ಸು, ಕೆಲವರಿಗೆ ಮೂರು ನೂರು ವರ್ಷಗಳು, ಇನ್ನು ಕೆಲವರಿಗೆ ಎರಡುನೂರು; ಸಣ್ಣವಯಸ್ಸಿನವರೆಂದರೆ ಅದೋ ಅಲ್ಲಿ ಕೆಂಪು ಸೀರೆ ಉಟ್ಟು ಕುಳಿತಿದ್ದಾರಲ್ಲ ನನ್ನ ಅಜ್ಜಿ, ಆಕೆಗೆ ನೂರುವರ್ಷ ವಯಸ್ಸು. ಅಪ್ಪ ಅಮ್ಮನಿಗೆ ಇನ್ನು ಆರೋಗ್ಯ ಸರಿ ಇರುವುದರಿಂದ ಅವರು ಹೊಲದಲ್ಲಿ ಕೆಲಸ ಮಾಡುತ್ತಿದ್ದಾರೆ. ಒಮ್ಮೊಮ್ಮೆ ಇವರನ್ನು ಗುರುತಿಸಲು ನನಗೇ ಅದೆಷ್ಟೋ ಸಲ ಗೊಂದಲವಾಗುತ್ತದೆ. ಬದುಕಿಗೆ ಒಂದು ಕಾಲಮಿತಿ ಬೇಕು ನೋಡಿ. ಹೀಗೆ ದೀರ್ಘವಾದರೆ, ದೀರ್ಘವಾಗುವುದೇನು ಬಂತು, ಬದುಕಿಗೆ ಇಲ್ಲಿ ಕೊನೆ ಎಂಬುದೇ ಇಲ್ಲ. ಗ್ರೀಕ್ ಪುರಾಣದಲ್ಲಿನ ರಾಜಕುಮಾರ ಟೆಥಾನಸ್‌ನ ಕತೆಯಂತಾಗಿದೆ ನಮ್ಮ ಬದುಕು. ಸಾವೇ ಬೇಡವೆಂದು ವರ ಪಡೆದ ಟೆಥಾನಸ್ ವಯಸ್ಸಾಗಿ ಶರೀರ ಶಿಥಿಲಗೊಂಡಾಗ ಸಾವು ಬೇಕೆಂದು ಹಂಬಲಿಸಿದನಂತೆ. ಕೊನೆಗೆ ಬಯಸಿ ಬಯಸಿ ಸಾವು ಪಡೆದನಂತೆ. ನೋಡಿ, ಸಾವಿಗೆ ಎಷ್ಟೊಂದು ಮಹತ್ವವಿದೆ' ವೆಂಕಟ್ರಮಣ ಒಂದು ಕ್ಷಣ ಮಾತು ನಿಲ್ಲಿಸಿ ದೂರದ ದಿಗಂತದತ್ತ ತನ್ನ ದೃಷ್ಟಿ ಹರಿಸಿದ. ಆ ಕ್ಷಣಕ್ಕೆ ಬ್ರಹ್ಮದತ್ತನಿಗೂ ಮಾತು ಬೇಡವೆನಿಸಿತು.

'ಸುಮಾರು ನಾಲ್ಕು ನೂರು ವರ್ಷಗಳಿಗೂ ಹಿಂದೆ ಕೆಲವು ಕುಟುಂಬಗಳು ದುಡಿಮೆ ಅರಸುತ್ತ ಈ ಜಾಗಕ್ಕೆ ಬಂದವಂತೆ. ಇಲ್ಲಿನ ಫಲವತ್ತಾದ ಮಣ್ಣು, ಕಾಡು, ಗಿಡಮರಗಳ ಸಮೃದ್ಧಿಯನ್ನು ನೋಡಿ ಇಲ್ಲೇ ನೆಲೆನಿಲ್ಲಲು ಬಯಸಿದರು. ಪುಟ್ಟ ಪುಟ್ಟ ಗುಡಿಸಲುಗಳು ನಿರ್ಮಾಣವಾದವು. ಹತ್ತಿರದಲ್ಲೆ ಗುಡ್ಡದ ಬದಿಯಲ್ಲಿ ಬಾವಿ ನಿರ್ಮಿಸಿದರು. ಬದುಕು ಸಮೃದ್ಧವಾಯಿತು. ಕ್ರಮೇಣ ಕುಟುಂಬಗಳು ಬೆಳೆದು ಇವತ್ತು ನೂರಕ್ಕೂ ಹೆಚ್ಚು ಕುಟುಂಬಗಳು ಇಲ್ಲಿ ವಾಸಿಸುತ್ತಿವೆ. ಅಚ್ಚರಿಯ ಸಂಗತಿ ಎಂದರೆ ಅಲ್ಲಿಂದ ಇಲ್ಲಿಯವರೆಗೆ ಈ ಊರಲ್ಲಿ ಒಂದೇ ಒಂದು ಸಾವು ಸಂಭವಿಸಿಲ್ಲ. ಇದೇ ಕಾರಣದಿಂದ ಬೇರೆ ಯಾವ ಊರಿನವರೂ ನಮ್ಮೊಂದಿಗೆ ನೆಂಟಸ್ತನಕ್ಕೆ ಮುಂದಾಗುತ್ತಿಲ್ಲ. ಇಲ್ಲಿನ ಕುಟುಂಬಗಳಲ್ಲೇ ಪರಸ್ಪರ ಹೆಣ್ಣು ಗಂಡುಗಳನ್ನು ಕೊಟ್ಟು ತೆಗೆದುಕೊಳ್ಳುವ ಪದ್ಧತಿಯನ್ನು ರೂಢಿಸಿಕೊಂಡಿರುವುದರಿಂದ ಕುಟುಂಬ ಘಟಕ ಬೆಳೆಯುತ್ತಿದೆ. ನಮಗಿರುವ ಸಮಸ್ಯೆ ಎಂದರೆ ಯಾವ ಮನೆಯಲ್ಲೂ ಸಾವು ಸಂಭವಿಸದೆ ಇರುವುದು. ಹಾಗೆಂದು ರೋಗರುಜಿನಗಳು ಮತ್ತು ವೃದ್ಧಾಪ್ಯದಿಂದ ಊರು ಮುಕ್ತವಾಗಿದೆಯೆಂದು ಅರ್ಥವಲ್ಲ. ದಿನಬೆಳಗಾದರೆ ಪ್ರತಿಕುಟುಂಬದಲ್ಲಿನ ವಯೋಸಹಜ ಕಾಯಿಲೆಗಳು ಮತ್ತು ಅವರ ಗೋಳು, ನರಳಾಟಗಳಿಂದ ಊರು ಅಶಾಂತವಾಗಿರುತ್ತದೆ. ಸ್ಮಶಾನ ಸದೃಶ್ಯವಾದ ಈ ಬದುಕಿಗೆ ಅರ್ಥವೇ ಇಲ್ಲದಂತಾಗಿದೆ. ಈಗ ಈ ಊರಿನಲ್ಲಿನ ಪ್ರತಿ ಮನೆಯೂ ಸಾವಿಗಾಗಿ ಕಾಯುತ್ತಿದೆ, ಅದು ಎಂದು ಬರುವುದೆಂದು. ನಿಮ್ಮಂಥವರನ್ನು ನೋಡಿದಾಗಲೆಲ್ಲ ನೀವು ಎಷ್ಟೊಂದು ಪುಣ್ಯವಂತರೆಂದು ನಮಗೆ ಅಸೂಯೆ ಆಗುತ್ತದೆ. ನಿಮ್ಮ ಬದುಕು ಸುಂದರವಾಗಿರುವುದಕ್ಕೆ ಆ ಸಾವು ಎನ್ನುವ ವಾಸ್ತವವೇ ಕಾರಣ. ಮನುಷ್ಯ ಸತ್ತು ಹೋಗದೇ ಇದ್ದರೆ ಈ ಜಗತ್ತು ಎಷ್ಟೊಂದು ಅಸಹ್ಯ ಅನಿಸುತ್ತೆ ಅನ್ನೊದಕ್ಕೆ ನಮ್ಮೂರೇ ಸಾಕ್ಷಿ. ಬಿಡಿ, ಇದೆಲ್ಲ ನಮ್ಮ ದುರಾದೃಷ್ಟ' ಎಂದು ಮಾತು ನಿಲ್ಲಿಸಿದ ವೆಂಕಟ್ರಮಣ.

ಬ್ರಹ್ಮದತ್ತ ವೆಂಕಟ್ರಮಣನ ಜೊತೆಗೆ ಇಡೀ ಊರು ಸುತ್ತಿ ಬಂದ. ತಾನು ನೋಡಿದ ಪ್ರತಿ ಮನೆಯೂ ಒಂದು ಮತ್ತೊಂದರ ಛಾಯೆಯಂತೆ ಗೋಚರಿಸಿತು. ಎಲ್ಲ ಮನೆಗಳಲ್ಲೂ ವೃದ್ಧರು,